ದಿನಾಂಕ : 08.08.2024 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :**

ನಾನು ಬೀರೇಶ್ವರ ಬ್ಯಾಂಕಿನಲ್ಲಿ ಬಟ್ಟೆ ವ್ಯವಹಾರ ಮಾಡಲು 30 ಸಾವಿರ ಸಾಲವನ್ನು ಪಡೆದಿರುತ್ತೇನೆ. ನನಗೆ ಏಕ್ಸಿಸ್ ಬ್ಯಾಂಕ ಮತ್ತು ಬ್ಯಾಂಕ ಆಫ್ ಬರೋಡಾದಲ್ಲಿ ಖಾತೆ ಹೊಂದಿದ್ದೇನೆ. 2012-13 ರಿಂದ 2016 ರವರೆಗೆ ಬೀರೇಶ್ವರ ಬ್ಯಾಂಕಿನಲ್ಲಿ ಸಾಲ ಪಡೆದಿದ್ದೇನೆ. ಬ್ಯಾಂಕ ಆಫ್ ಬರೋಡಾದಲ್ಲಿ ಖಾತೆಯಲ್ಲಿ ಎಷ್ಟು ಹಣ ವ್ಯವಹಾರ ಆಗಿದೆ ಅಂತಾ ಹೇಳಲು ಬರುವುದಿಲ್ಲಾ. 2020-21 ರಲ್ಲಿ ಬ್ಯಾಂಕ ಆಫ್ ಬರೋಡಾದಲ್ಲಿ ಖಾತೆಯಲ್ಲಿ ಎಷ್ಟು ಹಣ ವ್ಯವಹಾರ ಆಗಿದೆ ಅಂತಾ ಹೇಳಲು ಬರುವುದಿಲ್ಲಾ. ಬ್ಯಾಂಕ ಆಫ್ ಬರೋಡಾದಲ್ಲಿ ಖಾತೆಯ ವಿವರವನ್ನು ಹಾಜರು ಮಾಡಲು ನನಗೆ ಯಾವುದೇ ತೊಂದರೆ ಇಲ್ಲಾ. ಸಾಕ್ಷಿಗೆ ಒಂದು ಚೆಕ್ಕನ್ನು ತೋರಿಸಿದ್ದು ಅದು ಯಾರದು ಅಂತಾ ಗೊತ್ತಿಲ್ಲಾ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಚೆಕ್ಕನ್ನು ತೋರಿಸಿ ಕೇಳಲಾಗಿ ಅದನ್ನು ಆರೋಪಿತನು ಬರೆದಿರುತ್ತಾನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಎರಡು ಚೆಕ್ಕಗಳ ದೃಢೀಕೃತ ನಕಲುಗಳನ್ನು ತೋರಿಸಿ ಕೇಳಲಾಗಿ ಅದರಲ್ಲಿ ಇರುವ ಅಕ್ಷರಗಳು ಒಂದೇ ಎಂದು ಒಪ್ಪಿದ್ದು ಅವುಗಳನ್ನು ನಿಡಿ-01 ಮತ್ತು 02 ಎಂದು ಗುರುತಿಸಲಾಯಿತು.

ಆರೋಪಿತನಿಗೆ ಹಣವನ್ನು ಕೊಡುವ ಕಾಲಕ್ಕೆ ನನ್ನ ಹತ್ತಿರ 4 ಲಕ್ಷ 50 ಸಾವಿರದಿಂದ 5 ಲಕ್ಷ ಹಣ ಇತ್ತು. ಆರೋಪಿತನಿಗೆ ನಾನು ಮನೆ ಕಟ್ಟಲು ಕೂಡಿಟ್ಟ ಹಣದಿಂದ ಕೊಟ್ಟಿರುತ್ತೇನೆ. ನಾನು ಮನೆಕಟ್ಟಲು ಕೂಡಿಟ್ಟ ಹಣದಿಂದ ಆರೋಪಿತನಿಗೆ ಕೊಟ್ಟಿದ್ದೇನೆ ಅಂತಾ ದೂರಿನಲ್ಲಿ ಮತ್ತು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲಾ ನಾನು ಆದಾಯ ತೆರಿಗೆಯನ್ನು ಭರಣ ಮಾಡುವುದಿಲ್ಲಾ. ಬ್ಯಾಂಕಿಗೆ ಚೆಕ್ಕನ್ನು ಸಲ್ಲಿಸುವಾಗ ಚಲನನ್ನು ಬ್ಯಾಂಕಿನಲ್ಲಿ ಬರೆಸಿರುತ್ತೇನೆ. ದಿನಾಂಕಃ

28.12.2020 ರಂದು ಬ್ಯಾಂಕಿಗೆ ಹೋಗಿರುತ್ತೇನೆ. ನಾನು ಸದರಿ ದಿನ ಒಂದೇ ಚೆಕ್ಕನ್ನು ಬ್ಯಾಂಕಿಗೆ ಹಾಕುತ್ತೇನೆ. ಆರೋಪಿತನಿಗೆ ಬಿಟ್ಟು ಲಕ್ಷ್ಮೀ ಕಲಾಲ ಇವರಿಗೆ ಹಣ ನೀಡಿರುತ್ತೇನೆ. ಲಕ್ಷ್ಮೀ ಕಲಾಲ ಇವರಿಗೆ 2,50,000/- ಹಣ ನೀಡಿರುತ್ತೇನೆ. ಲಕ್ಷ್ಮೀ ಕಲಾಲ ಇವರ ಮೇಲೆ ಪ್ರಕರಣ ದಾಖಲಿಸಿರುತ್ತೇನೆ. ಲಕ್ಷ್ಮೀ ಕಲಾಲ ಇವರ ಚೆಕ್ಕನ್ನು ಯಾವ ದಿನಾಂಕ, ತಿಂಗಳು ಹಾಕಿದ್ದೇನೆ ನೆನಪಿಲ್ಲಾ. ಲಕ್ಷ್ಮೀ ಕಲಾಲ ಇವರ ಪ್ರಕರಣ ಇಂದಿನವರೆಗೂ ಚಾಲ್ತಿಯಲ್ಲಿದೆ ಅಂದರೆ ಸರಿ. ಲಕ್ಷ್ಮೀ ಕಲಾಲ ಇವರಿಗೆ ಸಂಬಂಧಪಟ್ಟ ಚೆಕ್ಕನ್ನು ದಿನಾಂಕಃ 28.12.2020 ರಂದು ಬ್ಯಾಂಕಿಗೆ ಹಾಕಿದ್ದೇನೆ ಅಂದರೆ ಇರಬಹುದು ಆದರೆ ನೆನಪಿಲ್ಲಾ ಎಂದು ನುಡಿಯುತ್ತಾರೆ. ಆರೋಪಿತನ ಖಾತೆ 03.02.2015 ರಂದು ಕ್ಲೋಸ್ ಆಗಿದೆ ಎಂದರೆ ನನಗೆ ಗೊತ್ತಿಲ್ಲಾ. ಈ ಪ್ರಕರಣದ ಚೆಕ್ಕು ಕೆ ಇ ಬಿ ಯಲ್ಲಿ ಕೆಲಸ ಮಾಡುವ ಎಂ ಎನ್ ಕಾಗಿನೆಲೆ ಇವರ ಹತ್ತಿರ ಇತ್ತು ಎಂದರೆ ಸರಿಯಲ್ಲಾ.

ಎಂ ಎನ್ ಕಾಗಿನೆಲೆ ಮತ್ತು ಆರೋಪಿತನ ಮಧ್ಯ ವ್ಯವಹಾರ ಮುಗಿದ ಮೇಲೆ ಆರೋಪಿತನಿಗೆ ಕಣ್ಣು ಕಾಣದೆ ಇರುವುದರಿಂದ ಚೆಕ್ಕು ಕೇಳಿದಾಗ ಎಲ್ಲಿ ಇಟ್ಟಿದ್ದೇನೆ ಗೊತ್ತಿಲ್ಲಾ ಅಂತಾ ಹೇಳಿರುತ್ತಾರೆ ಎಂದರೆ ಸರಿಯಲ್ಲಾ. ಆರೋಪಿತನು ಎಂ ಎನ್ ಕಾಗಿನೆಲೆ ಇವರ ನನ್ನ ಖಾತೆ ಬಂದ್ ಆಗಿದೆ ಚೆಕ್ಕು ಕೊಡು ಅಂತಾ ಕೇಳಿದಾಗ ಎಲ್ಲಿ ಇದೆ ಅಂತಾ ಗೊತ್ತಿಲ್ಲಾ ಎಂದು ನುಡಿಯುತ್ತಾರೆ. ನಾನು ಆರೋಪಿತನ ಚೆಕ್ಕನ್ನು ಸಾದೀಕ ಕಾಗಿನೆಲೆ ಇವರ ಕಡೆಯಿಂದ ಪಡೆದುಕೊಂಡು ಚೆಕ್ಕನ್ನು ಬ್ಯಾಂಕಿಗೆ ಹಾಕಿ ದುರುಪಯೋಗ ಪಡಿಸಿಕೊಂಡಿದ್ದೇನೆ ಅಂದರೆ ಸರಿಯಲ್ಲಾ. ಆರೋಪಿತನಿಗೆ ಹಣಕೊಡುವಷ್ಟು ಆದಾಯ ಇಲ್ಲಾ ಎಂದರೆ ಸರಿಯಲ್ಲಾ. ನಾನು ಬೇರೆಯವರ ಕಡೆಯಿಂದ ಚೆಕ್ಕನ್ನು ಪಡೆದು ಸುಳ್ಳು ಹಣವನ್ನು ನಮೂದಿಸಿ ದಾಖಲಿಸಿದ್ದೇನೆ ಅಂದರೆ ಸರಿಯಲ್ಲಾ. ಆರೋಪಿತನು ನನಗೆ ಪರಿಚಯ ಇಲ್ಲದೇ ಇದ್ದರೂ ಸಹ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸ ಅದೆ.

ಜೆಎಂಎಫ್‌ಸಿ, ಬ್ಯಾಡಗಿ.